ರಾಜೀವ ನಾರಾಯಣ ನಾಯಕ



# ಒಂದು ನಾನ್ಸೆನ್ಸ್ ಪ್ರೇಮಕತೆ

ಮಹಾನಗರದೊಳಗೆ ಹಾದು ಹೋಗುವ ರೈಲು ಹಳಿಗಳು ಅಖಂಡ ನಗರ ಮತ್ತು ಉಪನಗರಗಳನ್ನು ಈಸ್ಟು ವೆಸ್ಟು ಎಂಬ ಅಸ್ಮಿತೆಗಳಲ್ಲಿ ಸೀಳಿ ಹಾಕಿವೆ. ಕೆಲವು ಸ್ಟೇಶನ್ನುಗಳ ಈಸ್ಟು ವೆಸ್ಟಿಗೂ ಸೂರ್ಯೋದಯ ಸೂರ್ಯಾಸ್ತದ ದಿಕ್ಕುಗಳಿಗೂ ತಾಳೆಯಾಗದಿದ್ದರೂ ಆ ಬಗ್ಗೆ ಯಾರೂ ಧಿಮಾಕ್ ಗರಮ್ ಮಾಡಿಕೊಳ್ಳುವುದಿಲ್ಲ. ನಗರದ ನಿಬಿಡತೆಯಲ್ಲಿ ತೂಗುವ ತೊಟ್ಟಿಲುಗಳಂತೆ ಕಾಣುವ ಸ್ಟೇಶನ್ನುಗಳ ಈಸ್ಟು ವೆಸ್ಟುಗಳು ಜನರ ನಿತ್ಯದ ಬದುಕಿನ ಚಲನೆಗೆ ದಿಕ್ಸೂಚಿಯಾಗಿವೆ.

ಮಾನಸರೋವರ ಸ್ಟೇಶನ್ನಿನಲ್ಲಿ ಇಂಥ ಗೊಂದಲಕ್ಕೆ ಆಸ್ಪದವೇ ಇಲ್ಲ. ಈ ಸ್ಟೇಶನ್ನಿನ ಪಶ್ಚಿಮಕ್ಕೆ ಸಮುದ್ರದಿಂದ ಒಳನುಗ್ಗಿರುವ ವಿಸ್ತಾರವಾದ ಖಾಡಿ ಮಾತ್ರ ಇರುವುದರಿಂದ ಪ್ರಯಾಣಿಕರು ಅತ್ತ